# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ,

ನಂ:16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು 560 052.

## ಅಧಿಸೂಚನೆ

ಅಧಿಸೂಚನೆ ಸಂಖ್ಯೆ ವೈ/01/2019–20/1016, ದಿನಾಂಕ 19.11.2019.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನವೀಕರಿಸಬಹುದಾದ ಇಂಧನ ಮೂಲಗಳಿಂದ ಇಂಧನ ಖರೀದಿ) (ಏಳನೆಯ ತಿದ್ದುಪಡಿ) ವಿನಿಯಮಗಳು, 2019.

<u>ಪೀಠಿಕೆ:</u>

ಆಯೋಗವು, ನವೀಕರಿಸಬಹುದಾದ ಇಂಧನ ಧೃಡೀಕರಣಪತ್ರ (ಆರ್ಇಸಿ) ಕಾರ್ಯವಿಧಾನದಡಿಯಲ್ಲಿ (Mechanism), ಆರ್.ಇ.ಸಿ. ಮಾನ್ಯತೆಗೆ ವಿತರಣಾ ಲೈಸೆನ್ಸುದಾರರನ್ನು ಸೇರ್ಪಡೆಗೊಳಿಸಲು ಮತ್ತು ರಾಜ್ಯದ ವಿದ್ಯುತ್ ಖರೀದಿಯ ಕ್ರೋಢೀಕರಿಸಿದ ವೆಚ್ಚ (ಎಪಿಪಿಸಿ) ದರದ ಮೇಲೆ ಕಡಿವಾಣ ವಿಧಿಸಲು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನವೀಕರಿಸಬಹುದಾದ ಇಂಧನ ಮೂಲಗಳಿಂದ ಇಂಧನ ಖರೀದಿ) ವಿನಿಯಮಗಳು, 2011ಕ್ಕೆ ಮತ್ತಷ್ಟು ತಿದ್ದುಪಡಿಯನ್ನು ತರುವ ಉದ್ದೇಶದಿಂದ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನವೀಕರಿಸಬಹುದಾದ ಇಂಧನ ಮೂಲಗಳಿಂದ ಇಂಧನ ಖರೀದಿ) (ಏಳನೆಯ ತಿದ್ದುಪಡಿ) ವಿನಿಯಮಗಳು, 2019 ಕರಡು ಪ್ರತಿಯನ್ನು ಪ್ರಕಟಿಸಿತ್ತು. ಆಯೋಗವು, ವಿದ್ಯುಚ್ಛಕ್ತಿ ಅಧಿನಿಯಮ, 2003ರ 181ನೇ ಪರಿಚ್ಛೇದದ 3ನೇ ಉಪ–ಪರಿಚ್ಛೇದದಡಿಯಲ್ಲಿ ಅಗತ್ಯಪಡಿಸಲಾದಂತೆ ಹಿತಾಸಕ್ತಿದಾರರಿಂದ, ಅಭಿಪ್ರಾಯಗಳು, ಅನಿಸಿಕೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿತು. ಆಯೋಗವು ಈ ವಿಷಯವಾಗಿ ಸಾರ್ವಜನಿಕ ವಿಚಾರಣೆಯನ್ನು ದಿನಾಂಕ: 18.10.2019ರಂದು ನಡೆಸಿತು. ಈ ಬಗ್ಗೆ ಹಿತಾಸಕ್ತಿದಾರರಿಂದ ಬಂದ ಅಭಿಪ್ರಾಯಗಳು / ಸಲಹೆ – ಸೂಚನೆಗಳನ್ನು ಪರಿಶೀಲಿಸಿದ ನಂತರ ಆಯೋಗವು, ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ ಕೇಂದ್ರ ಅಧಿನಿಯಮ 36)ರ 86ನೇ ಪರಿಚ್ಛೇದ (1)ನೇ ಉಪಪರಿಚ್ಛೇದ ಖಂಡ (ಇ) ಜೊತೆಗೆ ಓದಿಕೊಳ್ಳಲಾದ 181ನೇ ಪರಿಚ್ಛೇದದ ಅಡಿ ಪ್ರದತ್ತವಾದ ಮತ್ತು ಇತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ ಈ ಕೆಳಕಂಡ ವಿನಿಯಮಗಳನ್ನು ಮಾಡುತ್ತದೆ, ಎಂದರೆ.–

## ವಿನಿಯಮಗಳು

1. **ಕಿರು ಶೀರ್ಷಿಕೆ, ಅನ್ವಯತೆ ಮತ್ತು ಪ್ರಾರಂಭ.–**

(i) ಈ ವಿನಿಯಮಗಳನ್ನು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನವೀಕರಿಸಬಹುದಾದ ಇಂಧನ ಮೂಲಗಳಿಂದ ಇಂಧನ ಖರೀದಿ) (ಏಳನೆಯ ತಿದ್ದುಪಡಿ) ವಿನಿಯಮಗಳು, 2019 ಎಂದು ಕರೆಯಬಹುದು.

(ii) ಈ ವಿನಿಯಮಗಳು, ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

(iii) ಈ ವಿನಿಯಮಗಳು, ಅವು ಕರ್ನಾಟಕ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಅಸ್ತಿತ್ವದಲ್ಲಿರುವ ವಿನಿಯಮ 7ರ ತರುವಾಯ ಖಂಡ 7(2)ರ ಸೇರ್ಪಡೆ.–**

**1. ಅಸ್ತಿತ್ವದಲ್ಲಿರುವ ವಿನಿಯಮ 7ರ ತರುವಾಯ ಹೊಸದಾದ ಖಂಡ 7(2)ರನ್ನು ಕೆಳಕಂಡಂತೆ ಸೇರ್ಪಡಿಸತಕ್ಕದ್ದು:**

(i) ವಿತರಣಾ ಲೈಸೆನ್ಸುದಾರನು ಕೆಳಕಂಡ ಷರತ್ತುಗಳನ್ನು ಪೂರೈಸಿದ್ದಲ್ಲಿ, ರಾಜ್ಯ ಏಜೆನ್ಸಿಯಾದ ರಾಜ್ಯ ವಿದ್ಯುತ್‌ಪ್ರಮಾಣ (ಲೋಡು) ರವಾನೆ ಕೇಂದ್ರಕ್ಕೆ ಮಾನ್ಯತೆಗಾಗಿ ಅರ್ಜಿ ಸಲ್ಲಿಸಲು ಅರ್ಹನಾಗಿರತಕ್ಕದ್ದು:

(ಎ) ಅಧಿನಿಯಮದ ಪ್ರಕರಣ 62ರ ಅಡಿಯಲ್ಲಿ ನಿರ್ಧರಿಸಿದ ದರ ಅಥವಾ ಪ್ರಕರಣ 63ರಲ್ಲಿ ಅಳವಡಿಸಿಕೊಂಡಿರುವ ದರದಂತೆ, ಪರಿಶೋಧಿತ ಲೆಕ್ಕಗಳು ಲಭ್ಯವಿರುವ ಹಿಂದಿನ ಹಣಕಾಸು ವರ್ಷದಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಅನ್ನು, ಆಯೋಗದಿಂದಾಗಲೀ ಅಥವಾ ಹವಾಮಾನ ಬದಲಾವಣೆಯ ರಾಷ್ಟ್ರೀಯ ಕ್ರಿಯಾ ಯೋಜನೆ ಅಥವಾ "ದರ ನೀತಿ" (Tariff Policy) ಯಲ್ಲಿ ನಿಗದಿ ಪಡಿಸಿದ ನವೀಕರಿಸಬಹುದಾದ ಇಂಧನ ಖರೀದಿ ಭಾದ್ಯತೆಯಲ್ಲಿ ಯಾವುದು ಅಧಿಕವೋ ಅದಕ್ಕಿಂತ ಹೆಚುವರಿಯಾಗಿ ಪಡೆದಿರತಕ್ಕದ್ದು.

ಪರಂತು ಆಯೋಗದ ವತಿಯಿಂದ ವರ್ಷವೊಂದಕ್ಕೆ ನಿಗದಿ ಪಡಿಸಲಾದ ನವೀಕರಿಸಬಹುದಾದ ಇಂಧನ ಖರೀದಿ ಭಾದ್ಯತೆಯು ಹಿಂದಿನ ಹಣಕಾಸು ವರ್ಷಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

ಮತ್ತೂ ಪರಂತು, ಆಯೋಗದಿಂದಾಗಲೀ ಅಥವಾ ಹವಾಮಾನ ಬದಲಾವಣೆಯ ರಾಷ್ಟ್ರೀಯ ಕ್ರಿಯಾ ಯೋಜನೆ ಅಥವಾ ದರ ನೀತಿಯಲ್ಲಿ ನಿಗದಿಪಡಿಸಿದ ನವೀಖರಿಸಬಹುದಾದ ಇಂಧನ ಖರೀದಿ ಭಾದ್ಯತೆಯಲ್ಲಿ ಯಾವುದು ಅಧಿಕವೋ, ಆ ನವೀಕರಿಸಬಹುದಾದ ಇಂಧನ ಖರೀದಿ ಭಾದ್ಯತೆಯ ಮಿತಿಗಿಂತ ಹೆಚ್ಚುವರಿಯಾಗಿ ಪಡೆದ ನವೀಕರಿಸಬಹುದಾದ ವಿದ್ಯುತ್ ಖರೀದಿಯನ್ನು, ಮೊದಲಿಗೆ ಕಳೆದ ಮೂರು ಫರ್ಷಗಳಲ್ಲಿ ಆಯೋಗದಿಂದ ಮನ್ನಾ ಮಾಡಲಾದ ಅಥವಾ ಮುಂದೂಡಲಾದ ಯಾವುದೇ ಸೌರ ಶಕ್ತಿ ರಹಿತ ಅಥವಾ ಸೌರಶಕ್ತಿ ವಿದ್ಯುತ್ ಖರೀದಿ ಭಾದ್ಯತೆಯ ಕೊರತೆಗೆ ಹೊಂದಾಣಿಕೆ ಮಾಡತಕ್ಕದ್ದು ಮತ್ತು ಬಾಕಿ ಉಳಿದಂತಹ ನವೀಕರಿಸಬಹುದಾದ ವಿದ್ಯುತ್ ಖರೀದಿಯನ್ನು, ಮಾನ್ಯತೆಗಾಗಿ ಪರಿಗಣಿಸತಕ್ಕದ್ದು.

(ಬಿ) ವಿತರಣಾ ಲೈಸೆನ್ಸುದಾರನು, ಈ ವಿನಿಯಮಗಳ ಉಪಖಂಡ 7(2) (i) (ಎ)ರಲ್ಲಿ ತಿಳಿಸಿರುವಂತೆ ನವೀಕರಿಸಬಹುದಾದ ಇಂಧನ ಖರೀದಿ ಭಾದ್ಯತೆಯನ್ನು ಮೀರಿ ಪಡೆದ ನವೀಕರಸಬಹುದಾದ ಇಂಧನ ಮೂಲದ ವಿದ್ಯುತ್‌ಗೆ, ಆಯೋಗದಿಂದ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

(ii) ಒಂದು ವೇಳೆ ವಿರತಣಾ ಲೈಸೆನ್ಸುದಾರನು(ರು) ಈ ವಿನಿಯಮಗಳಿಗೆ ವಿರುದ್ಧವಾಗಿ ಮಾನ್ಯತೆಯನ್ನು ಪಡೆದ ಸಂದರ್ಭದಲ್ಲಿ, ಆಯೋಗವು ಸ್ವಯಂ ಪ್ರೇರಿತ್ವವಾಗಿ ಅಥವಾ ಅನ್ಯಥಾ, ಅಂತಹ ವಿತರಣಾ ಲೈಸೆನ್ಸುದಾರನಿಗೆ(ರಿಗೆ) ನೋಟೀಸನ್ನು ಜಾರಿ ಮಾಡಿದ ನಂತರ ಮಾನ್ಯತೆಯನ್ನು ರದ್ದುಪಡಿಸತಕ್ಕದ್ದು.

3. **ಅಸ್ತಿತ್ವದಲ್ಲಿರುವ ವಿನಿಯಮಗಳ ಖಂಡ 7ರ ಉಪಖಂಡ(ಸಿ)ಯನ್ನು ಕೆಳಕಂಡಂತೆ ಮಾರ್ಪಡಿಸತಕ್ಕದ್ದು:**

"(ಸಿ) ಆಯೋಗವು ಸಂಬಂಧಿತ ವರ್ಷಕ್ಕೆ ಕಾಲಕಾಲಕ್ಕೆ ಪ್ರಕಟಿಸಿದಂತೆ ರಾಜ್ಯದ ವಿದ್ಯುತ್ ಖರೀದಿಯ ಕ್ರೋಢೀಕರಿಸಿದ ವೆಚ್ಚದಲ್ಲಿ ಅಥವಾ ಆಯೋಗವು ಅದೇ ಸಂಬಂಧಿತ ವರ್ಷಕ್ಕೆ ಸಂಬಂಧಪಟ್ಟ ಆರ್‌ಇ ಮೂಲದ ವಿದ್ಯುತ್‌ಗೆ ನಿರ್ಣಯಿಸಿದ, ಸಾರ್ವತ್ರಿಕವಾಗಿ

ಅನ್ವಯವಾಗುವಂತಹ ದರದ (Generic Tariff) ಶೇ. 75ರಂತೆ, ಇದರಲ್ಲಿ ಯಾವುದು ಕಡಿಮೆಯೋ ಅ ದರದಲ್ಲಿ, ಆರ್ಇಸಿ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಂಡಿರುವ ವಿದ್ಯುತ್ ಉತ್ಪಾದನಾ ಕಂಪನಿಯು ಉತ್ಪಾದಿಸಿದಂತಹ ವಿದ್ಯುತ್ತನ್ನು ರಾಜ್ಯದಲ್ಲಿನ ವಿತರಣಾ ಕಂಪನಿಗಳಿಗೆ ಮಾರಾಟ ಮಾಡತಕ್ಕದ್ದು".

4. ಮೇಲಿನ ಖಂಡ 7(2)ರ ಸೇರ್ಪಡೆಯ ತತ್ಪರಿಣಾಮವಾಗಿ, ಅಸ್ತಿತ್ವದಲ್ಲಿರುವ ವಿನಿಯಮಗಳಲ್ಲಿ ಕೆಳಕಂಡ ಖಂಡಗಳು ಈ ಕೆಳಗಿನಂತೆ ಪ್ರತ್ಯಾಯೋಜಿಸಲ್ಪಡತಕ್ಕದ್ದು:

**(i)** ಖಂಡ 2(1) **(L)**

' "ರಾಜ್ಯ ಏಜೆನ್ಸಿ"ಎಂದರೆ, ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಆಧಾರಿತ ಯೋಜನೆಗಳಿಗೆ ಅಥವಾ ವಿತರಣಾ ಲೈಸೆನ್ಸುದಾರರಿಗೆ, ಸಂದರ್ಭಾನುಸಾರ, ಅಧಿಕೃತ ಮನ್ನಣೆ ನೀಡುವ ಹಾಗೂ ಆಯೋಗದ ನಿರ್ದೇಶನಗಳ ಪ್ರಕಾರ ಕಾರ್ಯಾಚರಣೆಯನ್ನು ಕೈಗೊಳ್ಳಲು ಆಯೋಗದಿಂದ ನಿಯಮಿತವಾದ ಏಜೆನ್ಸಿ;'

**(ii)** ಖಂಡ 6(2)

'ರಾಜ್ಯ ಏಜೆನ್ಸಿಯು, ಅಧಿಕೃತ ಮನ್ನಣೆ ಪಡೆದಿರುವ ವಿದ್ಯುತ್ ಉತ್ಪಾದಕರ ಮತ್ತು ವಿದ್ಯುತ್ ವಿತರಣಾ ಲೈಸೆನ್ಸುದಾರರ ವಿವರಗಳು ಮತ್ತು ಮೇಲೆ ಸೂಚಿಸಿರುವ ವಿದ್ಯುತ್ ವಿತರಣಾ ಲೈಸೆನ್ಸುದಾರರು ಮತ್ತು ಇತರ ಗ್ರಾಹಕರ ಆರ್.ಪಿ.ಓ. ಪಾಲನೆಯ ವಿವರಗಳನ್ನು ಒಳಗೊಂಡ ತ್ರೈಮಾಸಿಕ ವರದಿಗಳನ್ನು ಆಯೋಗಕ್ಕೆ ಸಲ್ಲಿಸತಕ್ಕದ್ದು.';

**(iii)** ಖಂಡ 6(3)

ಈ ನಿಯಮಾವಳಿಗಳ ಅಡಿಯಲ್ಲಿ ರಾಜ್ಯ ಏಜೆನ್ಸಿಯು ತನ್ನ ಕಾರ್ಯನಿರ್ವಹಣೆಯನ್ನು ಕೈಗೊಳ್ಳಲು ಅನುಕೂಲವಾಗುವಂತೆ,

ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಉತ್ಪಾದಕರು ಮತ್ತು ವಿತರಣಾ ಲೈಸೆನ್ಸುದಾರರು ಕಟ್ಟಬೇಕಾದ ಶುಲ್ಕವನ್ನು, ಕಾಲಕಾಲಕ್ಕೆ ಆಯೋಗವು ನಿರ್ಧರಿಸಬಹುದು.

5. ಅಸ್ತಿತ್ವದಲ್ಲಿರುವ ಖಂಡ 7ನ್ನು, ಖಂಡ 7(1) ಎಂದು ಮರುಸಂಖ್ಯೀಕರಿಸಿ ಮತ್ತು ಅದರ ಶೀರ್ಷಿಕೆಯನ್ನು "ಆರ್‌ಇ ಉತ್ಪಾದಕರುಗಳ ಮಾನ್ಯತೆಗಾಗಿ ಷರತ್ತುಗಳು" ಎಂದು ಓದಿಕೊಳ್ಳತಕ್ಕದ್ದು.

*ಆಯೋಗದ ಆದೇಶದ ಮೇರೆಗೆ,*

*ಕಾರ್ಯದರ್ಶಿ*

*ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ*